# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1904
2. ಮಾನ್ಯ ಸದಸ್ಯರ ಹೆಸರು : ಡಾ:ಎಂ.ಜಿ.ಮುಳೆ(ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : 24.03.2026

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಹಾಗೂ ಖಾಸಗಿ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಾದ ಕಬ್ಬಿನ ಬಾಕಿ ಮೊತ್ತ (Arrears) ಒಟ್ಟು ಎಷ್ಟು; ಕಳೆದ ಹಂಗಾಮಿನಲ್ಲಿ ಪೂರೈಕೆಯಾದ ಕಬ್ಬಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ Fair and Remunerative Price (FRP) ದರದಂತೆ ಸಂಪೂರ್ಣ ಪಾವತಿ ಮಾಡಲಾಗಿದೆಯೇ; (ಕಾರ್ಖಾನೆವಾರು ವಿವರ ನೀಡುವುದು); | 2025-26ನೇ ಹಂಗಾಮಿನಲ್ಲಿ ಬೀದರ್ ಜಿಲ್ಲೆಯಲ್ಲಿ ಒಟ್ಟು 5 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಈ ಕಾರ್ಖಾನೆಗಳು ದಿನಾಂಕ:28.02.2026ಕ್ಕೆ ಇದ್ದಂತೆ ಒಟ್ಟು 17.39 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿ, 1,61,670 ಮೆ.ಟನ್ ರಷ್ಟು ಸಕ್ಕರೆಯನ್ನು ಉತ್ಪಾದಿಸಿರುತ್ತವೆ. ಈ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಒಟ್ಟು ರೂ.669.07 ಕೋಟಿಗಳಷ್ಟು ಕಬ್ಬಿನ ಬಿಲ್ಲು ಪಾವತಿಸಬೇಕಾಗಿದ್ದು, ಈ ಪೈಕಿ ರೂ.382.13 ಕೋಟಿಗಳಷ್ಟು ಕಬ್ಬಿನ ಬಿಲ್ಲು ಪಾವತಿಸಿದ್ದು, ಇನ್ನೂ ರೂ.286.95 ಕೋಟಿಗಳಷ್ಟು ಬಾಕಿ ಉಳಿಸಿಕೊಂಡಿರುತ್ತವೆ. ಸದರಿ ಹಂಗಾಮು ಚಾಲ್ತಿಯಲ್ಲಿರುವುದರಿಂದ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪೂರ್ಣವಾಗಿ ಕಬ್ಬಿನ ಬಿಲ್ಲನ್ನು ಪಾವತಿಸಲು ಇನ್ನು ಅವಕಾಶವಿರುತ್ತದೆ. ಕಾರ್ಖಾನೆವಾರು ಮಾಹಿತಿಯನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| ಆ) | ಕಬ್ಬು ಸರಬರಾಜು ಮಾಡಿದ 14 ದಿನಗಳೊಳಗೆ ಪಾವತಿ ಮಾಡಬೇಕೆಂಬ ನಿಯಮವಿದ್ದರೂ, ಬೀದರ್ ಜಿಲ್ಲೆಯಲ್ಲಿ ಪಾವತಿ ವಿಳಂಬವಾಗುತ್ತಿರುವ ಪ್ರಮುಖ ಕಾರಣಗಳೇನು; ಕಾರ್ಖಾನೆಗಳ ಆರ್ಥಿಕ ಸಂಕಷ್ಟ, ಬ್ಯಾಂಕ್ ಸಾಲಭಾರ, ಅಥವಾ ಸಕ್ಕರೆ ದಾಸ್ತಾನು ಮಾರಾಟವಾಗದಿರುವುದಕ್ಕೆ ಕಾರಣವೇ; | ಕೇಂದ್ರ ಸರ್ಕಾರದ ಕಬ್ಬು (ನಿಯಂತ್ರಣ) ಆದೇಶ 1966 ರ ಕಲಂ 3(8) ರನ್ವಯ ಕಬ್ಬು ಸರಬರಾಜು ಮಾಡಿದ ರೈತರಿಗೆ 14 ದಿನಗಳ ಒಳಗಾಗಿ ಕಬ್ಬಿನ ಬಿಲ್ಲು ಪಾವತಿಸಲು ಕಾರ್ಖಾನೆಗಳಿಗೆ ಅವಕಾಶಗಳಿರುತ್ತವೆ. ನಿಗದಿತ ಅವಧಿಯಲ್ಲಿ ಕಬ್ಬಿನ ಬಿಲ್ಲು ಪಾವತಿಸದೇ ಇದ್ದರೆ ವಿಳಂಬದ ಅವಧಿಗೆ ಶೇ.15 ರಷ್ಟು ಬಡ್ಡಿಯನ್ನು ರೈತರಿಗೆ ಪಾವತಿಸಬೇಕೆಂದು ನಿಯಮವಿರುತ್ತದೆ.<br>ಸಕ್ಕರೆ (ನಿಯಂತ್ರಣ) ಆದೇಶ 2025ರ ಕಲಂ 4ರ ಅನ್ವಯ, ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ಸಕ್ಕರೆಯನ್ನು ಪ್ರತಿ ತಿಂಗಳು ಮಾರಾಟ ಮಾಡಬೇಕಾದ ಪ್ರಮಾಣವನ್ನು (Monthly Release Quota) ಕೇಂದ್ರ ಸರ್ಕಾರವು ಆದೇಶಿಸುತ್ತದೆ. ಈ ನಿಯಂತ್ರಣದ ಕಾರಣದಿಂದಾಗಿ, ಕಾರ್ಖಾನೆಗಳು ಉತ್ಪಾದಿಸಿದ ಒಟ್ಟು ಸಕ್ಕರೆಯ ಪೈಕಿ ನಿಗದಿತ ಪ್ರಮಾಣವನ್ನು |

...2

| | | |
|---|---|---|
| | | ಹೊರತುಪಡಿಸಿ, ಉಳಿದ ಭಾಗವು ಮಾರಾಟವಾಗದೇ ದಾಸ್ತಾನು ರೂಪದಲ್ಲಿ ಸಂಗ್ರಹವಾಗುತ್ತದೆ. ಇದಲ್ಲದೇ ಕಾರ್ಖಾನೆಗಳು ತನ್ನ ಕಬ್ಬು ಅರೆಯುವ ಸಾಮರ್ಥ್ಯವನ್ನು ಪೂರ್ಣವಾಗಿ ಉಪಯೋಗಿಸದೇ ಇರುವುದು, ಕಾರ್ಖಾನೆಗಳು ಸಕ್ಕರೆಯ ಜೊತೆಗೆ ಉಪ ಉತ್ಪನ್ನಗಳಾದ ಸಹ ವಿದ್ಯುತ್ ಮತ್ತು ಎಥನಾಲ್ ಘಟಕಗಳನ್ನು ಹೊಂದಿಲ್ಲದಿರುವುದು, ಕಾರ್ಖಾನೆಗಳು ಕಾರ್ಯನಿರ್ವಹಣೆಯನ್ನು ವೃತ್ತಿಪರವಾಗಿ ನಿರ್ವಹಿಸದೇ ಇರುವುದು, ಬ್ಯಾಂಕುಗಳಿಂದ ಪಡೆದಿರುವ ಸಾಲಗಳನ್ನು ಸಕಾಲದಲ್ಲಿ ಮರುಪಾವತಿಸದೇ NPA ಆಗಿದ್ದು, ಕಾರ್ಖಾನೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಬೀದರ್ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಆರ್ಥಿಕ ಸಂಕಷ್ಟ ಮತ್ತು ಬ್ಯಾಂಕುಗಳಿಂದ ಸಾಲ ಭಾರ ಇರುವುದರಿಂದ ಕಬ್ಬು ಸರಬರಾಜು ಮಾಡುವ ರೈತರಿಗೆ ನಿಗದಿತ ಅವಧಿಯಲ್ಲಿ ಕಬ್ಬಿನ ಬಿಲ್ಲನ್ನು ಪಾವತಿಸಲು ವಿಳಂಬವಾಗಿರುತ್ತದೆ.<br><br>ಹೀಗಿದ್ದಾಗ್ಯೂ, ಕಳೆದ ಮೂರು ವರ್ಷಗಳಿಂದ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಾರ್ಖಾನೆಗಳು ಪೂರ್ಣವಾಗಿ ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ. ಪ್ರಸಕ್ತ ಹಂಗಾಮಿನಲ್ಲಿಯೂ ಸಹ ಬಾಕಿ ಇರುವ ಕಬ್ಬಿನ ಬಿಲ್ಲನು ರೈತರಿಗೆ ಕೊಡಿಸಲು ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ. |
| ಇ) | ನಿಯಮಿತವಾಗಿ ರೈತರಿಗೆ ಹಣ ಪಾವತಿಸದ ಅಥವಾ ವಿಳಂಬ ಮಾಡುತ್ತಿರುವ ಸಕ್ಕರೆ ಕಾರ್ಖಾನೆಗಳ ವಿರುದ್ಧ ಸರ್ಕಾರವು ದಂಡಾತ್ಮಕ ಕ್ರಮ (Penalty) ಅಥವಾ Revenue Recovery Certificate (RRC) ನೋಟಿಸ್ ಜಾರಿಗೊಳಿಸಿರುವುದೇ ಇದ್ದಲ್ಲಿ, ಅಂತಹ ಕಾರ್ಖಾನೆಗಳ ವಿರುದ್ಧ ಕೈಗೊಂಡಿರುವ ಶಿಸ್ತು ಕ್ರಮಗಳೇನು; | ಪ್ರಸ್ತುತ 2025-26ನೇ ಹಂಗಾಮು ನವೆಂಬರ್ 2025 ರಿಂದ ಪ್ರಾರಂಭವಾಗಿದ್ದು, ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕಾಲದಲ್ಲಿ ಕಬ್ಬಿನ ಬಿಲ್ಲನ್ನು ಪಾವತಿಸದೇ ಇರುವುದರಿಂದ ಕಬ್ಬು (ನಿಯಂತ್ರಣ) ಆದೇಶ 1966 ರ ಕಲಂ 3(8)ರಡಿಯಲ್ಲಿ ಶಾಸನಬದ್ಧ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿದೆ. ಪ್ರಸ್ತುತ ಹಂಗಾಮು ಚಾಲ್ತಿಯಲ್ಲಿದ್ದು, ರೈತರಿಗೆ ಬಾಕಿ ಕಬ್ಬು ಬಿಲ್ಲು ಪಾವತಿಸಲು ಕಾರ್ಖಾನೆಗಳಿಗೆ ಇನ್ನು ಅವಕಾಶವಿರುತ್ತದೆ. ಇದಲ್ಲದೇ, ದಿನಾಂಕ:28.02.2026 ಕ್ಕೆ ಇದ್ದಂತೆ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಶೇ. 60 ಕ್ಕಿಂತ ಕಡಿಮೆ ಕಬ್ಬು ಬಿಲ್ಲು ಪಾವತಿಸಿರುವ ಸಕ್ಕರೆ ಕಾರ್ಖಾನೆಗಳಿಗೆ ಪರಿಶೀಲನೆಗಾಗಿ ಜಿಲ್ಲಾಮಟ್ಟದಲ್ಲಿ ತಂಡಗಳನ್ನು ರಚಿಸಲಾಗಿದೆ. ಸದರಿ ಸಮಿತಿಗಳು ಕಾರ್ಖಾನೆಗಳು ಅರೆದಿರುವ ಕಬ್ಬಿನ ಪ್ರಮಾಣ, ಕಾರ್ಖಾನೆಯು ಪ್ರತಿ ಮೆ.ಟನ್ ಕಬ್ಬಿಗೆ ಪಾವತಿಸುತ್ತಿರುವ ಮೊತ್ತ, ಅದರಂತೆ ರೈತರಿಗೆ ಪಾವತಿಸಬೇಕಾದ ಒಟ್ಟು ಮೊತ್ತ, ಪಾವತಿಸಿರುವ ಮೊತ್ತ, ಪಾವತಿಸಲು ಬಾಕಿ ಇರುವ ಮೊತ್ತ ಮತ್ತು ಕಾರ್ಖಾನೆಯು ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆಯಾನ ಹಂಚಿಕೆಯಾಗಿರುವ ಸಕ್ಕರೆ ಮಾರಾಟದಿಂದ ಲಭ್ಯವಾಗಿರುವ ಮೊತ್ತವನ್ನು ರೈತರಿಗೆ ಪಾವತಿಸಲು |

...3

| | | |
|---|---|---|
| | | ಉಪಯೋಗಿಸಲಾಗಿದೆಯೇ ಅಥವಾ ಇಲ್ಲವೇ, ಸಕ್ಕರೆ ದಾಸ್ತಾನು ಇತ್ಯಾದಿ ವಿವರಗಳನ್ನು ಕಾರ್ಖಾನೆಯ ಲೆಕ್ಕ ಪತ್ರಗಳೊಂದಿಗೆ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಲಾಗಿರುತ್ತದೆ. ಸದರಿ ತಂಡಗಳು ಕಾರ್ಖಾನೆಗಳಿಗೆ ಖುದ್ದಾಗಿ ಭೇಟಿ ನೀಡಿ ಕಾರ್ಖಾನೆಗಳು ಬಾಕಿ ಉಳಿಸಿಕೊಂಡಿರುವ ಕಬ್ಬು ಬಿಲ್ಲು ಮೊತ್ತವನ್ನು ವಿಳಂಬವಾಗಿ ಪಾವತಿ ಮಾಡಿರುವ ಸಂಬಂಧ ಕಾರ್ಖಾನೆಯ ವಿರುದ್ಧ ಕಬ್ಬು (ನಿಯಂತ್ರಣ) ಆದೇಶ 1966 ರಲ್ಲಿನ ಅವಕಾಶಗಳಂತೆ ವಸೂಲಾತಿ ದೃಢೀಕರಣ ಪತ್ರ (Recovery Certificate) ಹೊರಡಿಸುವ ಬಗ್ಗೆ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ಸಹ ಸೂಚಿಸಲಾಗಿರುತ್ತದೆ. ರೈತರಿಗೆ ಕಬ್ಬು ಬಿಲ್ಲು ಪಾವತಿಸದೇ ಇರುವ ಸಕ್ಕರೆ ಕಾರ್ಖಾನೆಗಳ ವಿರುದ್ಧ ವಸೂಲಾತಿ ದೃಢೀಕರಣ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಹೊರಡಿಸಿ, ರೈತರ ಕಬ್ಬು ಬಿಲ್ಲನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ರೈತರು ತಾವು ಪೂರೈಸಿದ ಕಬ್ಬಿನ ತೂಕ, ನಿಗದಿತ ದರ ಮತ್ತು ಪಾವತಿಯ ಸ್ಥಿತಿಗತಿಯನ್ನು ಪಾರದರ್ಶಕವಾಗಿ ತಿಳಿದುಕೊಳ್ಳಲು ಆನಲೈನ್ ಪಾವತಿ ಟ್ರ್ಯಾಕಿಂಗ್ ವ್ಯವಸ್ಥೆ Online Payment Tracking System) ಅಥವಾ ಮೊಬೈಲ್ ಆಪ್ ಜಾರಿಗೆ ತರುವ ಕುರಿತು ಸರ್ಕಾರದ ಮುಂದಿನ ಯೋಜನೆಗಳೇನು; | ಪ್ರಸ್ತುತ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡುವ ರೈತರಿಂದ ಖರೀದಿಸುವ ಕಬ್ಬಿನ ಪ್ರಮಾಣ, ಪಾವತಿಸುವ ಕಬ್ಬಿನ ದರ, ಪಾವತಿಸಬೇಕಾದ ಕಬ್ಬಿನ ಮೊತ್ತ ಮತ್ತು ಪಾವತಿಸಿರುವ ಕಬ್ಬಿನ ಮೊತ್ತದ ಬಾಕಿ ವಿವರಗಳನ್ನು ಪ್ರತಿ 15 ದಿನಗಳಿಗೊಮ್ಮೆ ಪಡೆಯಲಾಗುತ್ತದೆ.<br><br>ಇದಲ್ಲದೇ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದಿಂದ ಸಕ್ಕರೆ ಉದ್ಯಮಕ್ಕೆ ಸಂಬಂಧಿಸಿದ ಮಾಹಿತಿ / ಅಂಕಿ ಅಂಶಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಸಂಗ್ರಹಿಸಲು ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲಾಗಿರುತ್ತದೆ. ಪ್ರಸ್ತುತ ಸಕ್ಕರೆ ಕಾರ್ಖಾನೆಗಳು ನಿಯತಕಾಲಿಕವಾಗಿ ಸಲ್ಲಿಸಬೇಕಾಗಿರುವ ದೈನಂದಿನ, ಪಾಕ್ಷಿಕ, ಮಾಸಿಕ, ತ್ರೈಮಾಸಿಕ ಮತ್ತು ವಾರ್ಷಿಕ ವರದಿಗಳನ್ನು ಮ್ಯಾನ್ಯುಯಲ್/ಇ-ಮೇಲ್ ಮೂಲಕ ಸಲ್ಲಿಸುತ್ತಿದ್ದು ಇನ್ನು ಮುಂದೆ ಈ ರೀತಿಯ ಅಂಕಿ ಅಂಶಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ M/s. Deavnet Solutions, Pune ಇವರು ಸಕ್ಕರೆ ನಿರ್ದೇಶನಾಲಯಕ್ಕೆ ಅಭಿವೃದ್ಧಿಪಡಿಸಿರುವ ತಂತ್ರಾಂಶಕ್ಕೆ (Software) ದತ್ತಾಂಶ ಒದಗಿಸುವ ಸಂಬಂಧ ಸಕ್ಕರೆ ಕಾರ್ಖಾನೆಗಳ ನೋಡಲ್ ಅಧಿಕಾರಿ ಮತ್ತು ಅಸಿಸ್ಟೆಂಟ್ ನೋಡಲ್ ಅಧಿಕಾರಿಗಳಿಗೆ ಈಗಾಗಲೇ ತರಬೇತಿ ಕಾರ್ಯಕ್ರಮಗಳನ್ನು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ವತಿಯಿಂದ ನೀಡಲಾಗಿರುತ್ತದೆ. ಅಲ್ಲದೇ, ಎಲ್ಲಾ ಸಕ್ಕರೆ ಕಾರ್ಖಾನೆಗಳು ಸಂಬಂಧಪಟ್ಟ ದತ್ತಾಂಶ/ ಅಂಕಿ-ಅಂಶಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು |

...4

| | | |
|---|---|---|
| | | ಅನುಕೂಲವಾಗುವಂತೆ User ID ಮತ್ತು Password ಗಳನ್ನೂ ಸಹ ಈಗಾಗಲೇ ನೀಡಲಾಗಿರುತ್ತದೆ. ಸದರಿ ತಂತ್ರಾಂಶ ಮೂಲಕ ಮಾಹಿತಿಯನ್ನು ಸಲ್ಲಿಸುವಂತೆ ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಲಾಗಿರುತ್ತದೆ. ಪ್ರಸ್ತುತ ತಂತ್ರಾಂಶವನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |
| ಊ) | ಜಿಲ್ಲೆಯ ನಷ್ಟದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಆರ್ಥಿಕ ಸ್ಥಿತಿ ಸುಧಾರಿಸಲು ಆಧುನೀಕರಣಗೊಳಿಸಲು ಅಥವಾ Ethanol ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಸರ್ಕಾರದಿಂದ ಯಾವುದಾದರೂ ವಿಶೇಷ ಪುನಶ್ಚೇತನ ಪ್ಯಾಕೇಜ್ (Special Revival Package) ಘೋಷಿಸಲಾಗಿದೆಯೇ; ಇದ್ದಲ್ಲಿ, ಅದರ ವಿವರವೇನು? | ದುಡಿಯುವ ಬಂಡವಾಳ ಕೊರತೆ ಹಾಗೂ ಆರ್ಥಿಕ ಸಂಕಷ್ಟಕ್ಕೀಡಾಗಿ ನಷ್ಟದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕಬ್ಬು ಬೆಳೆಗಾರ ರೈತರ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಖಾಸಗಿಯವರಿಗೆ ದೀರ್ಘಾವಧಿಯ ಮೇಲೆ ಗುತ್ತಿಗೆ ನೀಡುವ ಮೂಲಕ ಪುನಃಶ್ಚೇತನಗೊಳಿಸುವುದು ಸರ್ಕಾರದ ಪ್ರಸ್ತುತ ನೀತಿಯಾಗಿದೆ. ಅದರಂತೆ, ರಾಜ್ಯದಲ್ಲಿ ಈವರೆವಿಗೆ 10 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು LROT (Lease Rehabilitate Operate Transfer & Build Own Operate Transfer (B.O.O.T) ಆಧಾರದ ಮೇಲೆ ದೀರ್ಘಾವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡುವುದರ ಮೂಲಕ ಪುನಃಶ್ಚೇತನಗೊಳಿಸಲು ಮತ್ತು ಉನ್ನತೀಕರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಬೀದರ್ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರದಿಂದ ಯಾವುದೇ ವಿಶೇಷ ಪುನಶ್ಚೇತನ ಪ್ಯಾಕೇಜ್ (Special Revival Package) ಅನ್ನು ಘೋಷಿಸಿರುವುದಿಲ್ಲ. |

**ಸಂಖ್ಯೆ:** ಸಿಐ 123 ಎಸ್‌ಜಿಎಫ್ 2026

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು), ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1697(1904) ಕ್ಕೆ ಅನುಬಂಧ

| | | | | | | | | | As on DATE : 28.02.2026 | | | | |
|---|---|---|---|---|---|---|---|---|---|---|---|---|---|
| SL. NO | Name of the factory | Crushing capacity (TCD) | Total cane crushed (in MTs) | Sugar produced (In MT) | Recovery (%) | Actual cane rate declared by factories to farmers (Rs./MT) | Actual Rate as per Factory Declaration includes H&T (Rs./MT) | Amount Payable as per Factory Declaration includes H&T (Rs.in lakhs) (4X8) | Amount paid by Factory (Includes H&T) (Rs.in lakhs) | Balance to be paid (Rs. in lakhs) (9-10) | % of payment (10/9*100) | Date of start | Date of close |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| | BIDAR DISTRICT | | | | | | | | | | | | |
| 1 | BHALKESHWAR SUGARS LTD, BAJOLAGA, BHALKI TALUK , BIDAR DISTRICT. | 5000 | 364485 | 26218 | 10.05 | 2900 | 3925 | 14305 | 8091 | 6214 | 57 | 15-11-2025 | |
| 2 | BIDAR KISSAN SHAKKAR KARKHANA LTD., MOGDAL VILLAGE, NATIONAL HIGHWAY NO.9, BIDAR TALUK & DISTRICT | 3500 | 497541 | 49680 | 10.10 | 2900 | 3811 | 18961 | 11598 | 7363 | 61 | 06-11-2025 | |
| 3 | MAHATHMA GANDHI SSK LTD., BHALKI TALUK. BIDAR DISTRICT. | 2500 | 378217 | 38265 | 10.23 | 2900 | 3867 | 14625 | 8845 | 5780 | 60 | 10-11-2025 | |
| 4 | NARANJA SSK LTD., IMAMPUR, BIDAR TALUK & DISTRICT. | 2500 | 291084 | 29054 | 10.13 | 2900 | 3800 | 11061 | 2821 | 8241 | 25 | 17-11-2025 | |
| 5 | SHREE BHAVANI SUGARS, BAROOR, BIDAR TALUK & | 1000 | 208301 | 18452 | 8.87 | 2900 | 3819 | 7955 | 6858 | 1097 | 86 | 26-10-2025 | |
| | **TOTAL** | **14500** | **1739630** | **161670** | **9.29** | | | **66907** | **38213** | **28695** | **57** | | |

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು